# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1112

2) ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ

3) ಉತ್ತರಿಸುವ ದಿನಾಂಕ : 21.08.2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹ ಒದಗಿಸಲಾಗಿದೆ; ಯಾವ ಯಾವ ಮಾನದಂಡದಲ್ಲಿ ವಿತರಿಸಲಾಗಿದೆ; ಹಾಗೂ ಪ್ರಸ್ತುತ ಇರುವ ಬೇಡಿಕೆ ಎಷ್ಟು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕದಲ್ಲಿ ಒಟ್ಟು 1036 ಪೊಲೀಸ್ ಸಿಬ್ಬಂದಿಯವರ ಮಂಜೂರಾತಿ ಬಲವಿದ್ದು, ಅದರಲ್ಲಿ 485 ಪೊಲೀಸ್ ಸಿಬ್ಬಂದಿಯವರಿಗೆ ವಸತಿಗೃಹಗಳನ್ನು ಹಂಚಿಕೆ ಮಾಡಲಾಗಿರುತ್ತದೆ.<br><br>ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕದಲ್ಲಿ ಪೊಲೀಸ್ ಸಿಬ್ಬಂದಿಯವರ ವಸತಿಗೃಹ ಕೋರಿಕೆ ಪತ್ರದ ದಿನಾಂಕದ ಜೇಷ್ಠತೆಯ ಆಧಾರದ ಮೇರೆಗೆ ವಸತಿಗೃಹವನ್ನು ಹಂಚಿಕೆ ಮಾಡಲಾಗುವುದು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸ್ವಂತ ಮನೆ ಇದ್ದಲ್ಲಿ ವಸತಿಗೃಹವನ್ನು ಹಂಚಿಕೆ ಮಾಡಲಾಗುವುದಿಲ್ಲ.<br><br>ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕಕ್ಕೆ ಇನ್ನೂ 240 ಸಿಬ್ಬಂದಿಗಳ ವಸತಿಗೃಹಗಳ ಬೇಡಿಕೆ ಇದೆ. |
| ಆ) | ಪೊಲೀಸ್ ಇಲಾಖೆಯಿಂದ ಸಿಬ್ಬಂದಿಗಳಿಗಾಗಿ ಪ್ರತ್ಯೇಕವಾದ ಶಾಲೆಗಳನ್ನು ತೆರೆಯಲು ಇಲಾಖೆ ಮುಂದೆ ಪ್ರಸ್ತಾವನೆ ಇದೆಯೇ; ಈ ಬಗ್ಗೆ ಇಲಾಖೆ ಮುಂದಿರುವ ಯೋಜನೆಗಳಾವುವು; | ಪೊಲೀಸ್ ಇಲಾಖೆಯಿಂದ ಸಿಬ್ಬಂದಿಗಳಿಗಾಗಿ ಪ್ರತ್ಯೇಕವಾದ ಶಾಲೆಗಳನ್ನು ತೆರೆಯಲು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಇ) | ಪೊಲೀಸ್ ಸಿಬ್ಬಂದಿಗಳು ನಿವೃತ್ತಿ ಹೊಂದಿದ ನಂತರ ಅವರ ಆರೋಗ್ಯದ ಮೇಲೆ ತುಂಬಾ ಒತ್ತಡ ಪರಿಣಾಮದಿಂದ ಆರೋಗ್ಯದಲ್ಲಿ ಉಂಟಾಗಿರುವ ಏರುಪೇರುಗಳನ್ನು ಸರಿಪಡಿಸಲು ಇಲಾಖೆ ಮುಂದಿರುವ ಪ್ರಸ್ತಾವನೆಗಳಾವುವು? | ಸರ್ಕಾರದ ಆದೇಶ ಸಂಖ್ಯೆ:ಒಇ 66 ಪೊಸಿಇ 2016, ದಿನಾಂಕ:19/07/2017ರನ್ವಯ ನಿವೃತ್ತ ಪೊಲೀಸ್ ಸಿಬ್ಬಂದಿ ಮತ್ತು ಅವರ ಪತಿ/ಪತ್ನಿ ರವರುಗಳಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವ ಸಲುವಾಗಿ ನಿವೃತ್ತ ಪೊಲೀಸ್ ಆರೋಗ್ಯ ಯೋಜನೆಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಸದರಿ ಯೋಜನೆಯಡಿಯಲ್ಲಿ ಸೇರ್ಪಡೆಗೊಳಿಸಲಾಗಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೆ, ಸಾಮಾನ್ಯ ಚಿಕಿತ್ಸೆಗೆ ಸಿಜಿಹೆಚ್ಎಸ್ ದರದಲ್ಲಿ ವಾರ್ಷಿಕ ರೂ.1.00 ಲಕ್ಷ ಹಾಗೂ ಸಂಕೀರ್ಣ ಚಿಕಿತ್ಸೆಗಳಿಗೆ ಹೆಚ್ಚಿನ ರೂ.1.00 ಲಕ್ಷ(ಒಟ್ಟಾರೆ ರೂ.2.00 ಲಕ್ಷಗಳ) ವರೆಗೆ ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುತ್ತಿದೆ. |

**ಸಂಖ್ಯೆ:ಹೆಚ್‌ಡಿ 83 ಪಿಬಿಎಲ್ 2025**

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು